ಎಂದಿಟ್ಟುಕೊಳ್ಳಿ. ಮಳೆ, ಕೊಳೆರೋಗ ಮುಂತಾದ ಜಂಜಾಟಗಳ ಮಧ್ಯೆ ಎಷ್ಟು ಔಷಧಿ ಹೊಡೆದರೂ ಬಿಟ್ಟರೂ ಅಡಕೆ ಮರದಲ್ಲಿ ಉಳಿಯುವುದು ಕಷ್ಟವೇ ಎಂಬಂಥ ಪರಿಸ್ಥಿತಿ. ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ ಎಂದು ಹೇಳುತ್ತ ಅಪ್ಪ ಔಷಧಿ ಹೊಡೆಯುವ ತಯಾರಿ ಮಾಡುತ್ತಿದ್ದರು. ನನ್ನ ಓದು, ಅಧ್ಯಯನಕ್ಕೆ ಇರುವ ಪ್ರೇರಣೆ ಅಪ್ಪನ ಈ ಸಾಂದರ್ಭಿಕ ಹೇಳಿಕೆಗಳೇ ಆಗಿವೆ ಎಂದುಕೊಂಡಿದ್ದೇನೆ. ಇಂತಹ ವಿಚಾರಗಳು ನಾನು ನೋಡುತ್ತಿದ್ದ ಯಕ್ಷಗಾನದಲ್ಲಿಯೂ ಸಾಂದರ್ಭಿಕವಾಗಿ ಪ್ರಸ್ತಾಪವಾಗುತ್ತಿದ್ದವು. ಒಂದಕ್ಕೊಂದು ಪೂರಕವಾಗಿರುವ ಈ ಪ್ರಕಾರಗಳು ನನಗೆ ಇಷ್ಟವಾದವು. ಕಾರ್ಕಳದಲ್ಲಿ ಕಾಲೇಜಿಗೆ ಹೋಗುವಾಗ ಲೈಬ್ರರಿಯಲ್ಲಿ ಅಕಸ್ಮಿಕವಾಗಿ ಒಂದು ಪುಸ್ತಕ ಕೈಗೆ ಸಿಕ್ಕಿತು. ಲಕ್ಷ್ಮೀಪುರಂ ಶ್ರೀನಿವಾಸ ಆಚಾರ್ಯರು ಬರೆದ 'ಹಿಂದೂ ದರ್ಶನ ಸಾರ' ಎಂಬ ಆ ಪುಸ್ತಕ ಓದಿ ನನಗೆ ಈ ಕ್ಷೇತ್ರದೆಡೆಗಿನ ಆಕರ್ಷಣೆ ಇನ್ನಷ್ಟು ಹೆಚ್ಚಿತು. ಆ ಪುಸ್ತಕವನ್ನು ಇಂದಿಗೂ ನಾನು ಓದುತ್ತೇನೆ.

◆ **ಅರಿವು, ಇರವು ಮತ್ತು ನಲಿವಿನ ಪ್ರಶ್ನೆಗಳೇ ತತ್ತ್ವಶಾಸ್ತ್ರದ ಹಿನ್ನೆಲೆಯಲ್ಲಿ ಇರುವ ಪ್ರಶ್ನೆಗಳು ಎಂದು ಹೇಳುತ್ತೀರಿ. ಎಷ್ಟೋ ಸಂದರ್ಭಗಳಲ್ಲಿ ಅರಿವು ಎಂಬುದೇ ದುಃಖಕಾರಕವೂ ಹೌದು ಎಂದು ಅನಿಸುತ್ತದೆಯೇ? ಇದನ್ನು ಮೀರುವ ಪ್ರಯತ್ನಗಳ ಕುರಿತು ವಿವರಿಸಬಹುದೇ?**

ತತ್ತ್ವಶಾಸ್ತ್ರದ ಮೂಲವನ್ನು ಸಾರ ಹಿಡಿದು ಈ ಮೂರು ಪರಿಕಲ್ಪನೆಗಳಲ್ಲಿ ಪ್ರಸ್ತುತಪಡಿಸಿದವರು ಎ.ಆರ್. ಕೃಷ್ಣಶಾಸ್ತ್ರಿಗಳು. ಇರವಿನ ಸಮಸ್ಯೆ, ಅರಿವಿನ ಸಮಸ್ಯೆ, ನಲಿವಿನ ಸಮಸ್ಯೆ– ಈ ಮೂರರಲ್ಲಿ ದರ್ಶನ ಶಾಸ್ತ್ರದ ವಸ್ತು ಎಲ್ಲವೂ ಅಂತರ್ಗತವಾಗಿದೆಎಂದು ಅವರು ಹೇಳುತ್ತಾರೆ. ಇರವಿನ ಸ್ವರೂಪವೇನು, ಅರಿವು ಹೇಗೆ ಉಂಟಾಗುತ್ತದೆ, ಯಾವ ಅರಿವು ಸರಿ, ಸುಖಪ್ರಾಪ್ತಿ, ದುಃಖ ನಿವೃತ್ತಿಗಳಿಗೆ ಹೇತು, ಮಾರ್ಗ ಯಾವುದು ಎಂಬುದೇ ತತ್ತ್ವಶಾಸ್ತ್ರದ ವಿವೇಚನೆಯ ಕೇಂದ್ರಬಿಂದು. ಅದಕ್ಕಾಗಿಯೇ ಜಗತ್ತಿನಲ್ಲಿ ನೂರಾರು ಸಿದ್ಧಾಂತಗಳ ಕಲ್ಪೆ, ವಾದ, ಚರ್ಚೆ, ಕಲಹ ಕೋಲಾಹಲಗಳು ನಡೆಯುತ್ತವೆ. ತಮಾಷೆಯೆಂದರೆ ನಾವು ಯಾವ ತತ್ತ್ವವನ್ನು ನಂಬಿ ಬೆಂಬಲಿಸಿ ಜಗಳಾಡುತ್ತಿರುತ್ತೇವೋ ಅದರಲ್ಲಿಯೂ ಮತ್ತೆ ಒಳ ಜಗಳ, ವೈರುಧ್ಯಗಳು ಉಂಟು. ಭಾರತದಲ್ಲಿ ಹೆಚ್ಚಿನ ದರ್ಶನಗಳು ಮತೀಯತೆಯ ಜೊತೆಗೆ ಸಮನ್ವಯಗೊಂಡಿವೆ. ಪಾಶ್ಚಾತ್ಯರ ದರ್ಶನ ಶಾಸ್ತ್ರವು ಕುತೂಹಲದಿಂದ ಹುಟ್ಟಿ ಬೆಳೆಯುತ್ತದೆ. ಆದರೆ ಭಾರತೀಯ ದರ್ಶನ ಶಾಸ್ತ್ರವು ದುಃಖಮೂಲವನ್ನು ಹುಡುಕಿ, ಅದಕ್ಕೆ ಪರಿಹಾರ ಹುಡುಕಿ ಹೊರಡುತ್ತ, ಅದು ಬೆಳೆಯುತ್ತದೆ. ಮೀರುವ ಪ್ರಯತ್ನ ಬಹುದೀರ್ಘವಾದುದು. ದರ್ಶನ ಎಂಬುದು ಸಂಸ್ಕೃತಿ, ನೀತಿ, ರಿಲಿಜನ್‌ಗಳನ್ನು ಒಳಗೊಂಡ ಭಾವ. ಬದುಕಿನ ಹಾಗೆ. 'ದೃಶ್ಯತೇ ಅನೇನ ಇತಿ ದರ್ಶನಂ' ಅಥವಾ ತತ್–ತ್ವ– ಅದುತನ ಎಂಬುದು ತತ್ತ್ವ.

◆ **ಯಕ್ಷಗಾನ ತಾಳಮದ್ದಳೆ ಮತ್ತು ತತ್ತ್ವಶಾಸ್ತ್ರ– ಈ ಪೈಕಿ ಯಕ್ಷಗಾನ ಮತ್ತು ತಾಳಮದ್ದಳೆಯ ಪ್ರಭಾವಳಿಯಲ್ಲಿಯೇ ನೀವು ಗೋಚರಿಸುತ್ತೀರಿ. ತತ್ತ್ವಶಾಸ್ತ್ರ ವಿಭಾಗದಲ್ಲಿ ನಿಮ್ಮ ನೋಟ–ನಿಲುವುಗಳು ಮಸುಕಾಯಿತು ಎಂದು ಅನಿಸುವುದಿಲ್ಲವೇ ?**

ಹೌದು. ಯಕ್ಷಗಾನ ನನಗೆ ಬಹಳ ಆಪ್ತವಾದ ವಿಷಯ. ಅಲ್ಲಿ ನನ್ನ ಪ್ರಸ್ತುತಿಯನ್ನು ಚಂದಗಾಣಿಸುವ ಸಲುವಾಗಿ ನಾನು ಇನ್ನಷ್ಟು ಓದುವುದಕ್ಕೆ ಮುಂದಾದೆ. ಭಾರತೀಯ ದರ್ಶನವನ್ನು ಮನೆಮನೆಗೆ ಮುಟ್ಟಿಸುವ ಜನರಿಗೆ ತಲುಪಿಸುವ ಕೆಲಸವನ್ನು ಯಕ್ಷಗಾನ ಮಾಡಬಲ್ಲುದು. ಸಮಾಜದಲ್ಲಿ ನನ್ನ ಗುರುತು ಸಾಹಿತಿ ಎಂದಾಗಲೀ, ತತ್ತ್ವ ಶಾಸ್ತ್ರಜ್ಞ ಎಂದಾಗಲೀ ಅಲ್ಲ. ಯಕ್ಷಗಾನ ಅರ್ಥದಾರಿಯಾಗಿಯೇ ಗುರುತಿಸಿ ಕೊಂಡಿರುವೆ. ಅದರ ಬಗ್ಗೆ ನನಗೆ ಬಹಳ ಖುಷಿಯಿದೆ.

ತತ್ತ್ವಶಾಸ್ತ್ರ ಎಂಬುದು ಒಂದು ವಿಷಯವಲ್ಲ. ಅದು ಜೀವನವನ್ನು ನೋಡುವ ಒಂದು ವಿಧಾನ. ಪ್ರತಿಯೊಬ್ಬನೂ ತತ್ತ್ವಜ್ಞಾನಿಯೇ ಆಗಿರುತ್ತಾನೆ. ಯಕ್ಷಗಾನವೆನ್ನುವುದು ಜನಪ್ರಿಯ ವೇದಾಂತದ ಒಂದು ಸ್ವರೂಪ. ಅರ್ಥಗಾರಿಕೆಯಲ್ಲಿ ಹಾಸ್ಯಗಾರ ದೇವರನ್ನು ತಮಾಷೆ ಮಾಡುತ್ತಾನೆ. ಈಶ್ವರನೆಂದರೆ ಹಾಸ್ಯಗಾರರ ಪಾಲಿಗೆ 'ಬೂದಿಗುಡ್ಡೆಯಲ್ಲಿ ವಾಸಿಸುವ ಪರಮೇಶ' , ಬಹುಭಾಷೆ, ಗಾದೆ, ಕತೆಗಳು ಸೇರಿಕೊಂಡು ಅದೊಂದು ತತ್ತ್ವಜ್ಞಾನವನ್ನು ಹೇಳಬಲ್ಲಂಥದ್ದು. ತತ್ತ್ವಶಾಸ್ತ್ರವನ್ನು ಸಾಮಾನ್ಯವಾಗಿ ಕಷ್ಟಕರ ವಿಷಯ ಎಂದೋ, ಮುಪ್ಪಿನ